## ಅಂಗೈಯಲ್ಲಿ ಅರಮನೆ

ಕಲೆ: ಗಣೇಶ ಆಚಾರ್ಯ



## ಯಾರ ಮನೆ?

ಲಾಕ್‌ಡೌನ್ ಸಮಯದಲ್ಲಿ ನಾನು ಹಾಗೂ ಪತ್ನಿ ಇಬ್ಬರೂ ಮನೆಯಿಂದಲೇ ಕೆಲಸ ಮಾಡುತ್ತಿದ್ದೆವು. ಯಾವಾಗಲೂ ಮುಚ್ಚಿಕೊಂಡೇ ಇರುತ್ತಿದ್ದ ನಮ್ಮನೆಯ ಬಾಗಿಲು ಅಪರೂಪಕ್ಕೆ ಹಗಲು ಹೊತ್ತಿನಲ್ಲೂ ತೆರೆದಿರುವುದನ್ನು ನೋಡಿ ನಮ್ಮ ಮನೆ ಮಾಲೀಕರ ಮಗ ಐದು ವರ್ಷದ ನಚಿಕೇತ ಮೆಲ್ಲಗೆ ಹೊಸ್ತಿಲ ಬಳಿ ಬಂದು ನಿಂತ. 'ಬಾರೊ ನಚಿಕೇತ ಒಳಗೆ' ಅಂದೆ. ಒಳಗೆ ಬಂದು ಮನೆಯ ತುಂಬೆಲ್ಲಾ ಕಣ್ಣಾಡಿಸುತ್ತ ನಿಂತ. 'ಯಾಕೆ ಹಾಗೆ ಮನೆ ನೋಡ್ತಾ ಇದ್ದೀಯಾ?' ಎಂದೆ. 'ಈ ಮನೆ ಯಾರದು?' ಅಂತ ಕೇಳಿದ. 'ನಿಮ್ಮದೇ ಮನೆ ಕಣೊ ಇದು' ಎಂದೆ. 'ಹಾಗಾದ್ರೆ ನೀವು ಯಾಕೆ ಇಲ್ಲಿದ್ದೀರಾ?' ಅಂದ. ನಾನು ಉತ್ತರ ಹೇಳಲಾಗದೆ ಪೆಚ್ಚಾದೆ.

**ಶರಣಬಸಪ್ಪ ಪಾಟೀಲ**

## 'ಬದರಿ ಪ್ರಸಾದ'

ಚಿಕ್ಕಪ್ಪನ ಷಷ್ಠಿಪೂರ್ತಿಗೆ ನಮ್ಮನ್ನು ಕರೆಯಲು ಅವರ ಕುಟುಂಬ ಬಂದಿತ್ತು. ಊಟವಾದ ಮೇಲೆ ಎಲ್ಲರೂ ಹಾಲಿನಲ್ಲಿ ಕುಳಿತು ಮಾತಾಡುತ್ತಿದ್ದರು. ನಾನು ರೂಮಿನಲ್ಲಿ ನಮ್ಮ ಎರಡು ವರ್ಷದ ಮೊಮ್ಮಗ ಬದರಿಯನ್ನು ಮಲಗಿಸುತ್ತಿದ್ದೆ. ಚಿಕ್ಕಮ್ಮ ರೂಮಿಗೆ ಬಂದು ಅಲ್ಲಿದ್ದ ಪ್ಲಾಸ್ಟಿಕ್ ಕುರ್ಚಿಯಲ್ಲಿ ಕೂರಲು ಹೋದರು. 'ಚಿಕ್ಕಮ್ಮ, ಆ ಕುರ್ಚಿಯಲ್ಲಿ ಕೂರಬೇಡಿ. ಅಲ್ಲಿ ಬದರಿಯ ಪ್ರಸಾದವಾಗಿದೆ' ಎಂದೆ. ತಕ್ಷಣ ಚಿಕ್ಕಮ್ಮ ಕುರ್ಚಿಯಲ್ಲಿದ್ದ ನೀರನ್ನು ಕೈಯಲ್ಲಿ ತಗೊಂಡು ಕಣ್ಣಿಗೊತ್ತಿಕೊಂಡು, ತಲೆಗೆ ಸವರಿಕೊಂಡು, 'ಬದರಿಗೆ ಯಾರೇ ಹೋಗಿದ್ದು? ಹೇಳಿದ್ರೆ ನಾವೂ ಬರ್ತಿದ್ವಿ' ಎಂದರು. 'ಚಿಕ್ಕಮ್ಮ, ಬದರಿ ಪ್ರಸಾದ ಅಂದರೆ ನನ್ನ ಮೊಮ್ಮಗ ಬದರಿ ಸುಸ್ಸು ಮಾಡಿದ್ದು' ಎಂದೆ. 'ಹೌದೇನೆ? ಇರಲಿ ಬಿಡು, ಚಿಕ್ಕ ಮಕ್ಕಳು ದೇವರ ಸಮಾನ' ಎಂದವರು ಮುಖ ಕಿವುಚಿ ಅಲ್ಲಿಂದ ಹೊರಗೇ ನಡೆದರು.

**ಶಶಿರೇಖಾ ನಾಗೇಂದ್ರ**

